**ದಿನಾಂಕಃ 19.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಜಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಎನ್ ಶಿವಕುಮಾರ್ 1ನೇ ಪ್ರತಿವಾದಿಯ ಗಂಡ ಎಂದರೆ ಸಾಕ್ಷಿದಾರರು ವಾದಿಯ ತಾಯಿಯು ಕೂಡಾ ಎನ್ ಶಿವಕುಮಾರ್ ನ ಹೆಂಡತಿ ಇದ್ದಾರೆ ಎನ್ನುತ್ತಾರೆ. ವಾದಿ ಮತ್ತು ಆತನ ತಾಯಿ ಎನ್ ಶಿವಕುಮಾರ್ ನಿಗೆ ಸಂಭಂದಪಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಯರ ಕುಟುಂಬದ ಸದಸ್ಯನಿಲ್ಲ ಮತ್ತು ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮೃತ ಎನ್ ಶಿವಕುಮಾರ್ 1ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾವುದೇ ಮಹಿಳೆಯನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮೃತ ಶಿವಕುಮಾರನ ಮನೆ ಇರುವ ನಿಟ್ಟೂರಿನ ಅವರ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗೂ ಮತ್ತು ವಾದಿಗೂ ಯಾವುದೇ ಸಂಭಂದ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ವಾದಿಯು ಮೃತ ಎನ್ ಶಿವಕುಮಾರನ ಮಗನಾಗಿರುವುದರಿಂದ ನಾನು ಸತ್ಯವಾಗಿ ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುತ್ತಾರೆ. ಈ ಹಂತದಲ್ಲಿ ಸಾಕ್ಷಿದಾರರರಿಗೆ ಒಂದು ಭಾವಚಿತ್ರವನ್ನು ತೋರಿಸಿ ಈ ಭಾವ ಚಿತ್ರದಲ್ಲಿರುವ ಮಗುವನ್ನು ಮೃತ ಶಿವಕುಮಾರ್ ಎನ್ ರವರು ಸಾಕಿಕೊಂಡಿದ್ದರು ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. **ಈ ಹಂತದಲ್ಲಿ ಸಾಕ್ಷಿದಾರರರಿಗೆ ಪ್ರತಿವಾದಿ ಪರ ವಕೀಲರು ಒಂದು ಭಾವಚಿತ್ರವನ್ನು ಮೊಖಾಬಿಲೆ ಮಾಡಿ ಇದರಲ್ಲಿ ಎನ್ ಶಿವಕುಮಾರ್ ಮತ್ತು ನೀವು ಕೂಡಾ ಇದ್ದಿರಿ ಎಂದು ಸೂಚಿಸಿದಾಗ ಸಾಕ್ಷಿದಾರರು ಹೌದು ಎಂದು ಉತ್ತರಿಸಿರುವುದರಿಂದ ಅದನ್ನು ನಿಡಿ-45 ಎಂದು ಗುರುತಿಸಲಾಗಿದೆ.** ಸಾಕ್ಷಿದಾರರು ಮುಂದುವರೆದು ನಿಡಿ-45 ರಲ್ಲಿ ನಾನು ಮತ್ತು ಮೃತ ಎನ್ ಶಿವಕುಮಾರ್ ರವರು ಮಾಜಿ ಮುಖ್ಯ ಮಂತ್ರಿ ಬಂಗಾರಪ್ಪರವರು ಚುನಾವಣೆ ಪ್ರಚಾರಕ್ಕೆ ಬಂದಾಗ ನಾವು ಒಂದು ಕಾರ್ಯಕ್ರಮದಲ್ಲಿ ಹಾಜರಾಗಿದ್ದೇವು ಎನ್ನುತ್ತಾರೆ. **ಈ ಹಂತದಲ್ಲಿ ಸಾಕ್ಷಿದಾರರರಿಗೆ ಪ್ರತಿವಾದಿ ಪರ ವಕೀಲರು ಒಂದು ಭಾವಚಿತ್ರವನ್ನು ಮೊಖಾಬಿಲೆ ಮಾಡಿ ಇದರಲ್ಲಿ ಮೃತ ಶಿವಕುಮಾರ್ ಮತ್ತು 1ನೇ**

**ಪ್ರತಿವಾದಿ ಒಂದು ಮಗುವಿನ ಜನ್ಮ ದಿನಾಚರಣೆಯನ್ನು ಆಚರಣೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ಹೌದು ಎಂದು ಉತ್ತರಿಸಿದ್ದಾರೆ, ಆದ್ದರಿಂದ ಅದನ್ನು ನಿಡಿ-46 ಎಂದು ಗುರುತಿಸಲಾಯಿತು.** ಮೃತ ಶಿವಕುಮಾರ್ ನು 2 ನೇ ಪ್ರತಿವಾದಿಗೆ ಸಾಕಿ ಅವನ ವಿಧ್ಯಾಭಾಸ ಭೂಮಿ ಶಾಲೆ ಮತ್ತು ವಿನಾಯಕ ಪದವಿ ಪೂರ್ವ ಶಾಲೆಯಲ್ಲಿ ಮತ್ತು ಇತರೆ ಶಾಲೆಗಳಲ್ಲಿ ಅಭ್ಯಾಸ ಮಾಡಿಸಿದ್ದಾರೆ ಎಂದರೆ ಸರಿ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ .**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ/-

ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು,

ಗುಬ್ಬಿ.